ಜಾಕೋಬ್ ಡಿಸೋಜ, ಕುರುವಳ್ಳಿ

*ಇಲ್ಲೊಬ್ಬರಿಗೆ ಮೂರು ಮಕ್ಕಳಿದ್ದಾರೆ. ಆಸೆಗೊಬ್ಬ, ಮೀಸೆಗೊಬ್ಬ, ಸೀಸೆಗೊಬ್ಬ ಅಂತಾನೆ. ಸರೀನಾ?*



ಅಕಟಕಟಾ! ಕ್ರಮವಾಗಿ ಮಂತ್ರಿ, ರೌಡಿ, ಕುಡುಕ ಆಗಿದ್ದಾರೆ ಎಂದಾಯಿತು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಎಲ್ಲಾ ಗುಡಿ, ಚರ್ಚು, ಮಸೀದಿಗಳು ಭೂಮಿಯ ಮೇಲಿದ್ದರೂ ದೇವರು ಮಾತ್ರ ಮೇಲಿದ್ದಾನೆ ಅನ್ನುತ್ತಾರಲ್ಲಾ..?*

ಕರೆಕ್ಟ್! ಪೂಜಾರಿ, ಪಾದ್ರಿ, ಮೌಲ್ವಿಗಳ ಆರ್ಭಟಕ್ಕೆ ಹೆದರಿ ದೇವ ಇವರಿಗೆ ಎಟುಕದ ಮಟ್ಟಕ್ಕೆ ಹತ್ತಿಬಿಟ್ಟಿದ್ದಾನಂತೆ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಹಾಲಾಹಲವಾಗಿರುವ ಮನಸ್ಸು ಹಾಲು ಜೇನಾಗುವುದು ಯಾವಾಗ ಸಾರ್?*

ಕಾಲಕೂಟದ ನಂತರವೇ ಪೀಯೂಷವಲ್ಲವೇ; ಮಂಥನ ಮುಂದುವರಿಸಿ.

ಹೇಮಾವತಿ ಜೈನ್, ಹೂವಿನ ಹಡಗಲಿ

*ಸಂಸಾರದೊಳಗೆ ಕನಸುಗಳ ಕಂತೆ ಏಕೆ ಕರಗುತ್ತದೆ ಸಾರ್?*



ನಿದ್ರಿಸುತ್ತಾ ಸಂಸಾರ ಮಾಡಲಾಗದಲ್ಲ, ವಾಸ್ತವಕ್ಕೆ ಕಣ್ಣು ಬಿಟ್ಟ ತಕ್ಷಣ ಕನಸು ಢಮಾರ್!

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ

*ನನ್ನ ಸ್ನೇಹಿತನೊಬ್ಬನಿಗೆ ನಾಚಿಕೆ, ಮಾನ, ಮರ್ಯಾದೆ ಏನೂ ಇಲ್ಲ. ಇವನನ್ನು ರಾಜಕೀಯಕ್ಕೆ ಸೇರಿಸಬಹುದಲ್ಲವೆ?*

ಮೊದಲು ಸೇರಿಸಿ; ಆದರೆ... ಸಮಾನಮನಸ್ಕರು ಸ್ನೇಹಿತರಾಗುತ್ತಾರೆ. ಅವನು ನಿಮ್ಮ ಸ್ನೇಹಿತನೆಂದರೆ, ನೀವೂ...?

ಎಂ.ಈ.ಚನ್ನಪ್ಪಸ್ವಾಮಿ, ಭದ್ರಾವತಿ

*ದೇವರು, ದಿಂಡ್ರು ಅಂತಾರಲ್ಲಾ, ದೇವರೇನೋ ಸರಿ; ದಿಂಡ್ರು ಅಂದ್ರೆ ಯಾರು?*

ದಿಂಡ್– ದಿಂಡಾಗಿ; ರು– ರುಚಿ, ರುಪಾಯಿ, ರೂಪಸಿ– ಗಳನ್ನು ಹೊಂದುವ ದೇವಮಾನವರು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮೂರ್ಖ ಎಂದರೇನು?*

ಮೂರು ಖಗಳ ಗುಣ ಇರುವ ವ್ಯಕ್ತಿ; ಖಬರಗೇಡಿತನ, ಖತಿ, ಖಯಾಲಿ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಬದುಕು ಮತ್ತು ಮೃತ್ಯು ಇವುಗಳ ಸ್ವಭಾವ ಅರಿಯುವುದಾದರೂ ಹೇಗೆ?*

1950ರ ದಶಕದ ಶ್ರೀ 420 ಚಿತ್ರದ ಹಾಡಿನಲ್ಲೇ ಇದೆಯಲ್ಲಾ– ಚಲ್‌ನಾ ಜೀವನ್‌ಕೀ ಕಹಾನಿ, ರುಕ್‌ನಾ ಮೌತ್ ಕೀ ನಿಶಾನಿ!

ಕೆ.ಭಾಸ್ಕರ ಮಕ್ಕಿತ್ತಾಯ, ಮಧುಗಿರಿ

*ನೇಣು ಹಾಕಿಕೊಳ್ಳಬೇಕೆಂದಿರುವವರ ಅಜ್ಜ ಆಲದ ಮರ ನೆಟ್ಟಿರದಿದ್ದರೆ ಅವರ ಪಾಡೇನು ರಾಂಜೀ?*

ತೊಂದರೆ ಇಲ್ಲ; ರೌಡಿಯ ಹತ್ತಿರ ತೀರಿಸಲಾಗದಷ್ಟು ಸಾಲ ಮಾಡಿಬಿಟ್ಟರಾಯ್ತು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಪರರ ಕಷ್ಟಕ್ಕಾಗದವರು 'ಪರೋಪಕಾರಿ' ಎಂಬ ಹಣೆಪಟ್ಟಿ ಹಾಕಿಕೊಳ್ಳುವುದು ಸರಿಯೆ?*

ಏಕಾಗಬಾರದು? ಅವರು ಇಹಕ್ಕೆ ಉಪಕಾರಿಗಳಲ್ಲ, ಪರಕ್ಕೆ ಅರ್ಥಾತ್ ಸಾವಿನತ್ತ ಸಾಗಲು ಉಪಕಾರಿಗಳೆಂದಾಗುವುದಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು

*ಸಾರ್, ನಿಮಗೆ ತುಲಾಭಾರ ಮಾಡಿಸಬೇಕೆಂದಿದ್ದೇನೆ. ಯಾವುದರಲ್ಲಿ ಮಾಡಿಸೋಣ?*

ನನ್ನ ಬೃಹದಾಕಾರಕ್ಕೆ ಕಳಚಿಬೀಳದಂತಹ ತಕ್ಕಡಿಯಲ್ಲಿ.

ವಿಜಯ್ ಹೆಮ್ಮಿಗೆ, ಮೈಸೂರು

*ಪ್ರೀತಿ ಅಂದರೆ ಹೃದಯ ಅಂತಾರಲ್ಲ, ಬೆನ್ನು, ಹೊಟ್ಟೆಗಳೇಕೆ ಹೋಲಿಸುವುದಿಲ್ಲ?*

ನಾಗರಪಂಚಮಿ ಮರೆತಿರೆ? ಬೆನ್ನು, ಹೊಟ್ಟೆಗಳನ್ನು ತಂಪುಗೊಳಿಸುವುದು ಸಹೋದರಿಯ ಪ್ರೀತಿಯ ದ್ಯೋತಕ.

## ಬಹುಮಾನಿತ ಪ್ರಶ್ನೆ

ಇ. ಜಯಪ್ರಕಾಶ್, ಚಿತ್ರದುರ್ಗ

*ಖನ್ನಡದ ಖಳ ಯಾರು? ಇದ್ದವರೋ, ಇರುವವರೋ, ಬರುವವರೋ?*

ಬರುವವರೇ– ಲಾಂಗ್ ಹಿಡಿದು ಚಂದಾ ಎತ್ತಲು ಬರುವವರು!

ಅಕ್ಷಯ ಜೈನ್, ಹೂವಿನ ಹಡಗಲಿ

*ಈ ಜಗ, ಈ ಧರ್ಮ, ಈ ಬದುಕು; ಏನಿದೆಲ್ಲ ಕಗ್ಗ?*

ಎಲ್ಲಿದೆ ಕಗ್ಗ? ಜಗಧರ್ಮವಿದ್ದರೆ ಬದುಕೇ ಸಗ್ಗ!

ಎಚ್.ಜಿ. ಜಗದೀಶ್, ಮೈಸೂರು

*ಕನ್ನಡಿಗರನ್ನು ಅಭಿಮಾನಶೂನ್ಯರು ಎನ್ನುವುದು ಏಕೆ?*

ಕಿಂಚಿತ್ತಾದರೂ ಅಭಿಮಾನವಿದ್ದಿದ್ದರೆ ಸಿನೆಮಾ, ಟಿ.ವಿ.ಗಳಲ್ಲಿ ಹೀಗೆ ತಪ್ಪುತಪ್ಪಾದ ಉಚ್ಚಾರಗಳು, ಸ್ಲಾಂಗ್‌ಗಳು ಇರುತ್ತಿರಲಿಲ್ಲ ಬಿಡಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಭೂಲೋಕದಲ್ಲಿ ರತಿ, ಮನ್ಮಥರ ಪ್ರಭಾವ ಇರದ ಸ್ಥಳ ಯಾವುದಿದೆ ಹೇ ರಾಂ?*




ಹೆಣ್ಣು ಇನ್ನೂ ವಾಸಿಸದ ಮೌಂಟ್ ಎವರೆಸ್ಟ್.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

*ಹೆತ್ತ ತಾಯಿಯಿಂದ ಮೊದಲ್ಗೊಂಡು ಕೃಷ್ಣನವರೆಗೂ ಎಲ್ಲರಿಂದಲೂ ಅನ್ಯಾಯವನ್ನೇ ಅನುಭವಿಸಿದ ಕರ್ಣ ಶಾಪಗ್ರಸ್ತನೆ?*

ದಾನ ಮಾಡುವುದೇ ಅವನಿಗಿದ್ದ ಅತಿ ದೊಡ್ಡ ಶಾಪ! ಕಂಡಕಂಡವರು ಕೇಳಿಕೇಳಿದ್ದನ್ನೆಲ್ಲ ಕೊಟ್ಟರೆ ಕಟ್ಟಿಗೆಯ ಚಟ್ಟವೇ ಗಟ್ಟಿ ಮರ್ಮಜ್ಞ!

ಎಚ್.ಆರ್. ದೇಸಾಯಿ. ರಾಯಚೂರು

*ಸ್ವಾಮಿಗಳನ್ನು ಅಡ್ಡಪಲ್ಲಕ್ಕಿಯಲ್ಲೂ, ಹೆಣವನ್ನು ಉದ್ದಪಲ್ಲಕ್ಕಿಯಲ್ಲೂ ಏಕೆ ಒಯ್ಯುತ್ತಾರೆ?*

ವ್ಯತ್ಯಾಸ ತಿಳಿಯಬೇಕಲ್ಲ!

■ ರಾಮ್